## ಪ್ರಾರ್ಥನೆ

# ಕೋರಿಕೆ

ಜಗವೆಲ್ಲ ನಗುತಿರಲಿ!
ಜಗದಳುವು ನನಗಿರಲಿ!
ನಾನಳಲು, ಜಗವೆನ್ನನೆತ್ತಿಕೊಳದೆ?
ನಾ ನಕ್ಕು, ಜಗವಳಲು, ನೋಡಬಹುದೆ? ॥ ೧ ॥

ತೆರವಾಗಿ ನನ್ನೆದೆಯು,
ಧರೆಯೆದೆಯು ಉಕ್ಕಿರಲಿ!
ಧರೆಯೊಳಗೆ ತೇಲಿಸುವೆನೆನ್ನೆದೆಯನು!
ಧರೆ ಬತ್ತಿ, ಎನ್ನೆದೆಯು ಉಕ್ಕಲೇನು? ॥ ೨ ॥

ಪೊಡವಿಯೈಸಿರಿವಡೆದು
ಬಡತನವು ನನಗಿರಲಿ!
ಕೈಯೊಡ್ಡೆ, ಪೊಡವಿಯೆನಗಿಕ್ಕದೇನು?
ಪೊಡವಿಯೇ ಮೈಯಳಿಯೆ, ಮಾಡಲೇನು? ॥ ೩ ॥

ವಿಶ್ವವನು ತುಂಬಿರುವ
ಈಶ್ವರನೆ ಅಳತೊಡಗೆ,
ಸೈತಿಡಲು, ಸೈಪಿಡಲು, ಬರುವನಾವಂ?
'ಹೇ ತಂದೆ' ಎನಲೆನ್ನನವನೆ ಕಾವಂ! ॥ ೪ ॥

— ಈಶ್ವರ ಸಣಕಲ್ಲ

## ಸೂಕ್ತಿಪ್ರಭ

**ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಮ್ ।**
**ತತಸ್ತತೋ ನಿಯಮ್ಯೈತತ್ ಆತ್ಮನ್ಯೇವ ವಶಂ ನಯೇತ್ ॥**

ಚಂಚಲವೂ ಅಸ್ಥಿರವೂ ಆದ ಮನಸ್ಸು ಯಾವ ಯಾವ ವಿಷಯದಿಂದ ಹೊರಕ್ಕೆ ಬರುವುದೋ ಆಯಾ ವಿಷಯದಿಂದ ಈ ಮನಸ್ಸನ್ನು ನಿಗ್ರಹಿಸಿ ಆತ್ಮನಲ್ಲಿಯೇ ವಶಪಡಿಸಿಕೊಳ್ಳಬೇಕು.

— ಭಗವದ್ಗೀತೆ, ೬.೨೬

ಮನವ ಘನದಲಿ ಕಟ್ಟಿ । ನೆನಹ ಮನದಲಿ ಕಟ್ಟಿ ।
ಮನವನ್ನಪಾನಕೆಳಸದ । ಯೋಗಿಗೆ
ವನವಾಸವೇಕೆ ಸರ್ವಜ್ಞ ॥ — ಸರ್ವಜ್ಞ

ದೀಪವಾಗು, ದೋಣಿಯಾಗು, ಮೆಟ್ಟಿಲಾಗು. ಇತರ ಜೀವಿಗಳ ಗಾಯ ನಿನ್ನಿಂದ ವಾಸಿಯಾಗಲಿ. ನಿನ್ನ ಮನೆಯಿಂದ ಹೊರಬಿದ್ದು ಓಡಾಡು, ಕುರುಬನಂತೆ.

— ರೂಮಿ

**ಪ್ರಕೀರ್ಣೇ ವಿಷಯಾರಣ್ಯೇ ಧಾವಂತಂ ವಿಪ್ರಮಾಥಿನಂ ।**
**ಜ್ಞಾನಾಂಕುಶೇನ ಕುರ್ವೀತ ವಶ್ಯಮಿಂದ್ರಿಯದಂತಿನಮ್ ॥**

ಹರಡಿಕೊಂಡಿರುವ ವಿಷಯಗಳೆಂಬ ಕಾಡಿನಲ್ಲಿ ಧಾವಿಸುತ್ತಾ ನಾಶಪಡಿಸುತ್ತಿರುವ ಇಂದ್ರಿಯವೆಂಬ ಆನೆಯನ್ನು ಜ್ಞಾನವೆಂಬ ಅಂಕುಶದಿಂದ ಹತೋಟಿಗೆ ತಂದುಕೊಳ್ಳಬೇಕು.

— ಸುಭಾಷಿತ ಸುಧಾನಿಧಿ

**ದ್ರುತಸ್ಯ ಭಗವದ್ಧರ್ಮಾತ್ ಧಾರಾವಾಹಿಕತಾಂ ಗತಾ ।**
**ಸರ್ವೇಶೇ ಮನಸೋ ವೃತ್ತಿಃ ಭಕ್ತಿರಿತ್ಯಭಿಧೀಯತೇ ॥**

ಭಗವಂತನ ಅಪಾರ ಕಾರುಣ್ಯಾದಿಗಳನ್ನು ಸ್ಮರಿಸಿಕೊಂಡು ಕರಗಿಹೋದ ಚಿತ್ತವೃತ್ತಿಯು ಆತನಲ್ಲಿಯೇ ಧಾರಾಕಾರವಾಗಿ ಹರಿಯುತ್ತಿದ್ದರೆ, ಆ ಚಿತ್ತವೃತ್ತಿಯು ಭಕ್ತಿ ಎನಿಸಿಕೊಳ್ಳುತ್ತದೆ.

— ಭಕ್ತಿರಸಾಯನ